ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/143೦ /2022–23 ದಿನಾಂಕ: 14.02.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 09.02.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 09.02.2023 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/430/2022-23 ದಿನಾಂಕ: 13.02.2023.

ದಿನಾಂಕ 09.02.2023 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಎನ್. ನರಸಿಂಹಮೂರ್ತಿ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಪ್ರೊ. ಕೆ. ಎಂ. ಮಹೇಶ್ | ಸದಸ್ಯರು |
| 6. | ಶ್ರೀ ಸತೀಶ್ ಎಂ. | ಸದಸ್ಯರು |
| 7. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 8. | ಪ್ರೊ. ಎಸ್. ಹರಿಪ್ರಸಾದ್ | ಸದಸ್ಯರು |
| 9. | ಡಾ. ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 10. | ಶ್ರೀ ಸಿ ಎನ್ ಶ್ರೀಧರ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕೋರಂ ಅಭಾವದಿಂದಾಗಿ ಸಭಾಧ್ಯಕ್ಷರು ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದರು.

ಹತ್ತು ನಿಮಿಷಗಳ ನಂತರ ಸಭೆ ಪ್ರಾರಂಭಿಸಲಾಯಿತು. ಕುಲಸಚಿವರು, ಸಭಾಧ್ಯಕ್ಷರಾದ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಸ್ವಾಗತವನ್ನು ಕೋರಿ, ಪ್ರಾಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ಸಭಾಧ್ಯಕ್ಷರು ಎಲ್ಲ ಸದಸ್ಯರನ್ನು ಅಭಿವಂದಿಸಿ, ಕಳೆದ ವಿದ್ಯಾವಿಷಯಕ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿವ ವಿವಿಧ ಪ್ರಮುಖ ಚಟುವಟಿಕೆಗಳ ಕುರಿತು ವಿವರಿಸಿದರು.

- ರಾಷ್ಟ್ರೀಯ ಶಿಕ್ಷಣ ನೀತಿ 2020 ಆಶಯದಂತೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ 4 ವರ್ಷಗಳ ಸ್ನಾತಕ ಕೋರ್ಸುಗಳನ್ನು ಆರಂಭಿಸಲಾಗಿ, ಪ್ರಥಮ ಸೆಮೆಸ್ಟರ್ ವ್ಯಾಸಂಗ ಮುಕ್ತಾಯವಾಗಿದ್ದು, ಪರೀಕ್ಷಾ ದಿನಾಂಕಗಳನ್ನು ಪ್ರಕಟಿಸಲಾಗಿದೆ.

- ಹೊರದೇಶದ ವಿಶ್ವವಿದ್ಯಾಲಯಗಳೊಂದಿಗೆ ಮತ್ತು ರಾಷ್ಟ್ರೀಯ ಸಂಸ್ಥೆಗಳು/ಕೈಗಾರಿಕೆಗಳೊಂದಿಗೆ ಶೈಕ್ಷಣಿಕ, ಸಂಶೋಧನೆ, ಇಂಟರ್ನಶಿಪ್, ಅಪ್ರೆಂಟೀಸ್‌ಶಿಪ್, ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ, ಇನಕ್ಯುಬೇಷನ್ ಸೆಂಟರ್ ಮುಂತಾದ ವಿಷಯಗಳಲ್ಲಿ ಸಹಯೋಗ ಹೊಂದಲು ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.

- ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಮುಂದಾಳತ್ವದಲ್ಲಿ ಯು.ಕೆ. ದೇಶದ ನಾಲ್ಕು ಬ್ರಿಟಿಷ್ ಮತ್ತು ಸ್ಕಾಟಿಷ್ ವಿಶ್ವವಿದ್ಯಾಲಯಗಳೊಂದಿಗೆ ಸಭೆ ಜರುಗಿಸಲಾಯಿತು. ಬರ್ಮಿಂಗ್ ಹ್ಯಾಮ್ ಸಿಟಿ ಯುನಿವರ್ಸಿಟಿ ಮತ್ತು ನಮ್ಮ ವಿಶ್ವವಿದ್ಯಾಲಯಗಳ ಜಂಟಿ ಸಹಭಾಗಿತ್ವದಲ್ಲಿ, ಬ್ಯುಸಿನೆಸ್ ಇನ್‌ಕ್ಯುಬೇಷನ್ ಸೆಂಟರ್ "Net Carbon Zero Hub" ಪ್ರಾರಂಭಿಸಲು ಆಸಕ್ತಿ ವ್ಯಕ್ತಪಡಿಸಿದ್ದು ಅದಕ್ಕೆ ಒಪ್ಪಿಗೆ ನೀಡಲಾಗಿದೆ. ಬ್ರಿಟಿಷ್ ಕೌನ್ಸಿಲ್ ಮತ್ತು ಬರ್ಮಿಂಗ್ ಹ್ಯಾಮ್ ಯುನಿವರ್ಸಿಟಿಯವರು ಒಟ್ಟು 30,000 ಪೌಂಡ್‌ಗಳ ಮೊತ್ತವನ್ನು ಹಾಗೂ ನಮ್ಮ ವಿಶ್ವವಿದ್ಯಾನಿಲಯ 10,000 ಪೌಂಡ್‌ಗಳನ್ನು ಇದಕ್ಕಾಗಿ ವೆಚ್ಚ ಮಾಡಲು ಒಪ್ಪಿಗೆ ನೀಡಲಾಗಿದೆ. ಇದೇ ತಿಂಗಳಿಂದ ಈ ಯೋಜನೆ ಪ್ರಾರಂಭವಾಗದ್ದು ಡಿಸೆಂಬರ್ ಅಂತ್ಯದೊಳಗೆ ಮೊದಲ ಹಂತದ ಪ್ರಾಜೆಕ್ಟ್ ಪೂರ್ಣಗೊಳ್ಳಬೇಕಿದೆ. ಈ ತಿಂಗಳ 14ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಜರುಗುವ ಸಭೆಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಅಧಿಕೃತವಾಗಿ ಪ್ರಾಜೆಕ್ಟ್ ಲಾಂಚ್ ಮಾಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

- ಇದರಂತೆ ನಾಲ್ಕು ಪೆನ್ಸಿಲ್ವೇನಿಯಾ ಸ್ಟೇಟ್ ಯುನಿವರ್ಸಿಟಿಗಳ ಜೊತೆಗೆ 2 ದಿವಸಗಳ ಸಮಾಲೋಚನೆ ಸಭೆಗಳು ಜರುಗಿ, ಈ ನಾಲ್ಕು ವಿಶ್ವವಿದ್ಯಾಲಯಗಳು ನಮ್ಮ ವಿಶ್ವವಿದ್ಯಾನಿಲಯದೊಂದಿಗೆ ಶೈಕ್ಷಣಿಕ/ಸಂಶೋಧನಾ ಒಡಂಬಡಿಕೆ ಹೊಂದಲು ಆಸಕ್ತಿ ತೋರಿಸಿವೆ.

- ವಿಜಯ ಕರ್ನಾಟಕ/ ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಬಳಗದ ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ದಿನಾಂಕ 4 ಮತ್ತು 5 ಫೆಬ್ರವರಿ 2023 ರಂದು **'ಕನ್ನಡ ಹಬ್ಬ'** ಆಚರಿಸಲಾಯಿತು. ಇದರಲ್ಲಿ, ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ವ್ಯಕ್ತಿತ್ವ ವಿಕಸನದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಾಡಿನ ಖ್ಯಾತ ಕಲಾವಿದರು, ಗಣ್ಯರು, ಮುತ್ಸದ್ದಿಗಳು, ಚಿತ್ರನಟರು, ಸಂಗೀತಗಾರರು, ಜನನಾಯಕರು, ಈ ಜನೋತ್ಸವದಲ್ಲಿ ಭಾಗವಹಿಸಿ ವಿದ್ಯಾರ್ಥಿ ಹಾಗೂ ಯುವಜನತೆಯನ್ನು ಪ್ರೋತ್ಸಾಹಿಸಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಮಾರಂಭದ ಉದ್ಘಾಟನೆಯನ್ನು ಮಾಡಿದರು. ಈ ಸಮಾರಂಭದ ಯಶಸ್ಸಿಗೆ ಸಹಕರಿಸಿದ ಎಲ್ಲ ಪ್ರಾಚಾರ್ಯರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲು ಕುಲಸಚಿವರಿಗೆ ಸೂಚಿಸಿದರು.

******

ವಿಷಯ ಸಂಖ್ಯೆ: 01

ವಿಷಯ : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಸದರಿ ಆಯವ್ಯಯ ಅಂದಾಜಿನ ಕರಡು ಪತ್ರವನ್ನು ದಿನಾಂಕ 07.02.2023 ರಂದು ಜರುಗಿದ ಹಣಕಾಸು ಸಮಿತಿ ಹಾಗೂ ದಿನಾಂಕ 08.02.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಶೀಲಿಸಿ ಅನುಮೋದನೆ ನೀಡಿದ್ದು, ಸದರಿ ಸಭೆಗಳ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆ ಒದಗಿಸಲಾಯಿತು.

**2023-24ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ**

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು | ರೂ. 17529.74 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು-ವೆಚ್ಚಗಳು | ರೂ. 18480.33 ಲಕ್ಷಗಳು |
| ಆಯವ್ಯಯದಲ್ಲಿ ಒಟ್ಟು ಕೊರತೆ ಮೊತ್ತ (Total Deficit in the Budget) | ರೂ. 950.59 ಲಕ್ಷಗಳು |

ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ಆಯವ್ಯಯ ಕುರಿತಂತೆ ಹೆಚ್ಚಿನ ವಿವರಗಳನ್ನು ನೀಡಲು, ವಿತ್ತಾಧಿಕಾರಿಗಳನ್ನು ಸಭೆಗೆ ಆಹ್ವಾನಿಸಲಾಯಿತು. ಅದರಂತೆ ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ, 2022-23 ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023-24ನೇ ಸಾಲಿನ ಆಯವ್ಯಯ ಅಂದಾಜು ಪತ್ರಗಳ ವಿವರಗಳನ್ನು ಕೆಳಗಿನಂತೆ ಸಭೆಗೆ ಒದಗಿಸಿದರು.

ಈಗಾಗಲೇ ಪ್ರಸ್ತಾಪಿಸಿರುವಂತೆ, 175.29 ಕೋಟಿ ಆದಾಯ ಹಾಗೂ 184.80 ಕೋಟಿ ರೂಪಾಯಿ ವೆಚ್ಚದ ಈ ಬಜೆಟ್, ಒಟ್ಟು 9.5 ಕೋಟಿ ರೂಪಾಯಿಗಳ ಕೊರತೆ ಬಜೆಟ್ ಆಗಿದ್ದು, ಆದಾಯವನ್ನು ಹೆಚ್ಚು ಮಾಡುವುದರಿಂದ ಹಾಗೂ ವೆಚ್ಚಗಳನ್ನು ನಿಯಂತ್ರಿಸುವ ಮೂಲಕ ಈ ಕೊರತೆಯನ್ನು ಸರಿದೂಗಿಸಲು ಪ್ರಯತ್ನಿಸಲಾಗುವುದು. 2023-24ನೇ ಸಾಲಿನ ಆಯವ್ಯಯದಲ್ಲಿ, ಮೂಲಭೂತ ಸೌಕರ್ಯಗಳಿಗೆ ಬಹುಪಾಲು ಹಣ ವಿನಿಯೋಗಿಸಲು ಪ್ರಸ್ತಾಪಿಸಲಾಗಿದೆ. 2.00 ಕೋಟಿ ರೂಪಾಯಿಗಳನ್ನು ಡಿಜಿಟಲ್ ಲೈಬ್ರರಿಗಾಗಿ, 5.00ಕೋಟಿ ರೂ. ಗಳನ್ನು ಕಂಪ್ಯೂಟರ್ ಗಳ ಖರೀದಿಗೆ, 1.6 ಕೋಟಿ ರೂ. ಗಳನ್ನು ಘಟಕ

ಮಹಾವಿದ್ಯಾಲಯದ ಮೂಲಭೂತ ಸೌಲಭ್ಯಗಳಿಗೆ, 2.00 ಕೋಟಿ ರೂ.ಗಳನ್ನು ಆನ್‌ಲೈನ್ ಪಾಠಪ್ರವಚನದ ಸೌಲಭ್ಯಗಳನ್ನು ಒದಗಿಸಲು, 1.00 ಕೋಟಿ ರೂ. ಗಳನ್ನು ಪ್ರಯೋಗಾಲಯಗಳ ಯಂತ್ರೋಪಕರಣಗಳ ಖರೀದಿಗೆ, 4.00ಕೋಟಿ ಪೀಠೋಪಕರಣಗಳಿಗಾಗಿ, 65.00 ಕೋಟಿಗಳನ್ನು ಕ್ಯಾಂಪಸ್ ಅಭಿವೃದ್ಧಿಗಾಗಿ, 4.00 ಕೋಟಿಗಳನ್ನು ಕ್ಯಾಂಪಸ್, ವೈಫೈ, ಡಿಜಿಟಲ್ ಸೆಕ್ಯುರಿಟಿ, ಡಾಟಾ ಸೆಂಟರ್, ಇತ್ಯಾದಿಗಳಿಗೆ ಆಯವ್ಯಯಮಾಡಲು ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಆಯವ್ಯಯದ ಕುರಿತು ಹೆಚ್ಚಿನ ವಿವರಣೆ ನೀಡುತ್ತಾ, ಈ ವರ್ಷ ಕಾನೂನು, ಶಿಕ್ಷಣ ಮತ್ತು ದೈಹಿಕ ಶಿಕ್ಷಣ, ಯೋಗ, ಕ್ರೀಡಾ ವಿಜ್ಞಾನದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಳಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಸರ್ಕಾರ ಮತ್ತು ಸಂಬಂಧಿಸಿದ ಸಂಸ್ಥೆಗಳೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಇವುಗಳನ್ನು ಹೊರತುಪಡಿಸಿ ಬೇರೆ ಯಾವ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲ. ಈಗಿರುವ ವಿಭಾಗಗಳನ್ನು, ಗ್ರಂಥಾಲಯ ಹಾಗೂ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸುವುದು ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು. ಶೈಕ್ಷಣಿಕ ಕಟ್ಟಡಗಳು ಮರುಜ್ಜೀವನಗೊಳ್ಳುತ್ತಿದ್ದು, ಹೊಸ ಶೈಕ್ಷಣಿಕ ಕಟ್ಟಡದ ನಿರ್ಮಾಣ ಅಂತಿಮ ಘಟ್ಟದಲ್ಲಿದೆ, ಇವುಗಳಿಗೆ Smart Class Room ಉಪಕರಣ, ಪೀಠೋಪಕರಣಗಳನ್ನು ಒದಗಿಸುವುದು, ಗ್ರಂಥಾಲಯ ಡಿಜಿಟಲೀಕರಣ, ಇ-ಮಸ್ತಕಗಳನ್ನು ಮತ್ತು ಇ-ಜರ್ನಲ್ ಖರೀದಿ, ವಿಶ್ವವಿದ್ಯಾನಿಲಯದ ಸಂಪೂರ್ಣ ಆವರಣವನ್ನು ಡಿಜಿಟಲ್ ಸೆಕ್ಯುರಿಟಿಗೆ ಒಳಪಡಿಸುವುದು, ವೈಫೈ ಸೌಲಭ್ಯ ಒದಗಿಸುವ ಕೆಲಸಗಳನ್ನು ಆದ್ಯತೆಯಾಗಿ ಪರಿಗಣಿಸಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ, ಆಧುನಿಕ ಕ್ರೀಡಾಂಗಣ ನಿರ್ಮಾಣಗೊಳ್ಳುತ್ತಿದ್ದು, ಆ ಸೌಲಭ್ಯಗಳ ಸದುಪಯೋಗಪಡಿಸಲು ಹಾಗೂ ಕ್ರೀಡಾ ಸೌಕರ್ಯಗಳ ನಿರ್ವಹಣೆಗೆ ದೈಹಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ದೈಹಿಕ ಶಿಕ್ಷಣ, ಯೋಗ ಮತ್ತು ಕ್ರೀಡಾ ವಿಜ್ಞಾನದ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗ ಪ್ರಾರಂಭಿಸಲು ಮತ್ತು ಸರ್ಕಾರ ಈಗಾಗಲೇ ಮಂಜೂರಿಸಿರುವ ಕಾನೂನು ಮತ್ತು ಸಾರ್ವಜನಿಕ ನೀತಿ ವಿಷಯದ ಸ್ನಾತಕೋತ್ತರ ವಿಭಾಗದಲ್ಲಿ ಸ್ನಾತಕ ಕಾನೂನು ವ್ಯಾಸಂಗ ನೀಡುವ "ಸ್ಕೂಲ್ ಆಫ್ ಲಾ" ಪ್ರಾರಂಭಿಸಿ ಅದನ್ನು ಹಿಂದಿನ ಖ್ಯಾತ 'ಯುನಿವರ್ಸಿಟಿ ಲಾ ಕಾಲೇಜ್' ಕಟ್ಟಡದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಈ ಕುರಿತು ಈಗಾಗಲೇ ಸರ್ಕಾರಕ್ಕೆ ಮತ್ತು ಬಾರ್ ಕೌನ್ಸಿಲ್ ಆಫ್ ಇಂಡಿಯಾ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು. ಪ್ರಸ್ತುತ ವಿದ್ಯುನ್ಮಾನ ಅವಲಂಬಿತ ಸನ್ನಿವೇಶದಲ್ಲಿ, ವಿಶ್ವವಿದ್ಯಾಲಯದಲ್ಲಿ ಡಿಜಿಟಲ್ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಆದ್ಯತೆಯಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಸತೀಶ ಎಂ. ರವರು, ಆಯವ್ಯಯದಲ್ಲಿ ಒಳಗೊಂಡಿರುವ ಡಿಜಿಟಲ್ ಸೌಲಭ್ಯಗಳ ಪ್ರಸ್ತಾಪ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಶ್ಲಾಘನೀಯ ಎಂದು ಹೇಳಿ ಭೌತಿಕ

ಸೌಲಭ್ಯಗಳ ಜೊತೆಗೆ, ಮಾನವ ಸಂಪನ್ಮೂಲಗಳನ್ನು ಒದಗಿಸುವುದು ಅಷ್ಟೇ ಪ್ರಮುಖವೆಂದು ಹೇಳಿ, ಈ ಕುರಿತು ಕೈಗೊಂಡ ಕ್ರಮಗಳ ವಿವರ ಹಾಗೂ ಶುಲ್ಕ ಏರಿಕೆ, ವಿದ್ಯಾರ್ಥಿ ಕಲ್ಯಾಣ ನಿಧಿಯ ವಿವರಗಳನ್ನು ಬಯಸಿದರು.

ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿಯವರು, ಆಯವ್ಯಯದ ಪುಟ ಸಂ. 15 ರಲ್ಲಿರುವ ಲೆಕ್ಕ ಶೀರ್ಷಿಕೆ 4–10–26–256 'ಶಾಸನಬದ್ಧ ಅಧಿಕಾರಗಳು/ವಿ.ಸಿ.ಗೆ ಸಂಪ್ಚುರಿ ಭತ್ಯೆಯ ಖರ್ಚು' ಇದರ ಶೀರ್ಷಿಕೆ ಸರಿಯಿಲ್ಲ, ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ, ವಿದೇಶಗಳಿಂದ ಆಗಮಿಸುವ ಅತಿಥಿಗಳಿಗೆ/ಗಣ್ಯವ್ಯಕ್ತಿಗಳಿಗೆ ಹಾಗೂ ವಿಶೇಷ ಸಂದರ್ಭಗಳಲ್ಲಿ ಆಯೋಜಿಸುವ ಅತಿಥಿ ಸತ್ಕಾರಕ್ಕೆ ಕುಲಪತಿಗಳಿಗೆ, ಅವಕಾಶ ನೀಡುವ ಈ ಶೀರ್ಷಿಕೆ ಅಡಿಯಲ್ಲಿ ಮಾಡುವ ವೆಚ್ಚಗಳು ಲೆಕ್ಕ ಪರಿಶೋಧನೆಯ ವ್ಯಾಪ್ತಿಗೆ ಹೊರತುಪಡಿಸಿ ಕುಲಪತಿಗಳ ವಿವೇಚನೆಗೆ ಒಳಪಟ್ಟಿರುತ್ತದೆ. ಕಾರಣ ಇದನ್ನು 'ಕುಲಪತಿಗಳ ಸಂಪ್ಚುಯರಿ ಅಲೊಯನ್ಸ್' "Vice-Chancellor's Sumptuary Allowance" ಎಂದು ಬದಲಾಯಿಸಬೇಕೆಂದು ಹಾಗೂ ಈ ಶೀರ್ಷಿಕೆಯಲ್ಲಿ ಬಜೆಟ್ ಅವಕಾಶವನ್ನು ಹೆಚ್ಚಿಸಬೇಕೆಂದು ಹೇಳಿದರು. ರಾಜ್ಯದ ಇತರ ವಿಶ್ವವಿದ್ಯಾನಿಲಯಗಳಲ್ಲಿ ಇಂತಹ ಅವಕಾಶ ಇರುವುದನ್ನು ಪ್ರಸ್ತಾಪಿಸಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು ಘಟಿಕೋತ್ಸವ ಹಾಗೂ ಇನ್ನಿತರ ವಿಶೇಷ ಸಂದರ್ಭಗಳಲ್ಲಿ ತಮ್ಮ ವಿಶಾಲವಾದ ಗೃಹ ಕಛೇರಿಯಲ್ಲಿ ಏರ್ಪಡಿಸುವ ಬ್ಯಾಂಕ್ವೆಟ್ ಊಟದ ವೆಚ್ಚವನ್ನು ಈ ಶೀರ್ಷಿಕೆಯಡಿಯಲ್ಲಿ ಬರಿಸುತ್ತಾರೆ ಎಂದು ಹೇಳಿದರು. ಹಾಗಾಗಿ ಈ ಶೀರ್ಷಿಕೆ ಶಿರೋನಾಮೆ ಬದಲಾಯಿಸಿ ಬಜೆಟ್ ಮೊತ್ತವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಸದಸ್ಯರಾದ ಪ್ರೊ. ಎಸ್ ಹರಿಪ್ರಸಾದ್ ರವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯೂ ಸಹ ಇಂತಹ ಪದ್ಧತಿ ಇರುವುದನ್ನು ತಿಳಿಸಿ, ಇತ್ತೀಚಿನ ದಿವಸಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಸಂಖ್ಯೆಯ ವಿದೇಶಿ ಗಣ್ಯರು ಹಾಗೂ ಪ್ರತಿಷ್ಠಿತ ವ್ಯಕ್ತಿಗಳು ಬೇಟಿ ನೀಡುತ್ತಿದ್ದು ವಿವಿಧ ಒಡಂಬಡಿಕೆಗಳಿಗಾಗಿ ಕುಲಪತಿಗಳು ಹಾಗೂ ಪ್ರಾಧ್ಯಾಪಕರೊಂದಿಗೆ ಸಮಾಲೋಚನಾ ಸಭೆಗಳು ಜರುಗುತ್ತಿವೆ. ಅಂತಹ ಸಂದರ್ಭಗಳಲ್ಲಿ ಗುಣಮಟ್ಟದ ಅತಿಥಿ ಸತ್ಕಾರಕ್ಕೆ ಅವಕಾಶ ನೀಡಲು ಹಾಗೂ ಈ ಶೀರ್ಷಿಕೆಯನ್ನು "Vice-Chancellor's Sumptuary Allowance" ಎಂದು ಬದಲಾಯಿಸಿ ಅದಕ್ಕೆ ನಿಗದಿಪಡಿಸಿದ ಬಜೆಟ್ ಮೊತ್ತವನ್ನು ಹೆಚ್ಚಿಸಬೇಕೆಂದು ಪ್ರಸ್ತಾಪಿಸಿದರು.

ಸದಸ್ಯರಾದ ಶ್ರೀ ಕೆ.ಎಂ. ಮಹೇಶ ರವರು, ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೂ ಸಹ ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅವಕಾಶ ಕಲ್ಪಿಸಬೇಕು ಹಾಗೂ ಭಾರತೀಯ ಜ್ಞಾನ ಯೋಜನೆ, (Indian Knowledge System) ರಾಷ್ಟ್ರೀಯ ಶಿಕ್ಷಣ ನೀತಿಯ ಒಂದು ಭಾಗ. ಅದರನ್ವಯ ಭಾರತೀಯ ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡಲು ಕಾರ್ಯ ಯೋಜನೆಯನ್ನು ರೂಪಿಸಬೇಕು. ಇದರ ಅಂಗವಾಗಿ ಸಂಸ್ಕೃತ ವಿಭಾಗವನ್ನು ಪ್ರಾರಂಭಿಸಿ, ಭಾರತೀಯ ಜ್ಞಾನದ ಪ್ರಸಾರಕ್ಕೆ ಕ್ರಮವಹಿಸಬೇಕು ಎಂದು ಹೇಳಿದರು.

ಶ್ರೀ ರಂಗಪ್ಪ ನವರು ಆಯವ್ಯಯ ಉತ್ತಮವಾಗಿ ಮೂಡಿಬಂದಿದೆ, ಇದನ್ನು ಸಿದ್ಧಪಡಿಸಲು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಬೇಕಾಗಿತ್ತು ಎಂದು ಹೇಳಿದರು ಹಾಗೂ ಇದರಲ್ಲಿ ಕಲ್ಪಿಸಲಾಗಿರುವ ಹಣಕಾಸಿನ ಅವಕಾಶಗಳ ವೆಚ್ಚದ ಪೂರ್ವದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯಬೇಕೆಂದು ಹೇಳಿದರು.

ಕುಲಪತಿಗಳು ಸದಸ್ಯರ ಅನಿಸಿಕೆಗಳಿಗೆ ಸ್ಪಂದಿಸಿ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಭೌತಿಕ ಸೌಲಭ್ಯಗಳ ಜೊತೆಗೆ, ಉತ್ತಮ ಶಿಕ್ಷಕರ ಮಾರ್ಗದರ್ಶನ ಅಗತ್ಯವೆಂಬುದರ ಸಂಪೂರ್ಣ ಅರಿವು ಇದ್ದು, ಈ ದಿಸೆಯಲ್ಲಿ, ವಿಶ್ವವಿದ್ಯಾನಿಲಯ ಅವಿರತವಾಗಿ ಶ್ರಮವಹಿಸುತ್ತಿದೆ. ಸರ್ಕಾರ 161 ಶಿಕ್ಷಕರ ಹುದ್ದೆಗಳಿಗೆ ಮಂಜೂರಾತಿ ನೀಡಿದೆ. ಅವುಗಳಲ್ಲಿ ಈ ಹಿಂದೆಯೆ 58 ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಿದೆ. ಆ ಪ್ರಕ್ರಿಯ ಅಂತಿಮ ಹಂತದಲ್ಲಿದೆ. ಸರ್ಕಾರದಿಂದ ಪರಿನಿಯಮಗಳಿಗೆ ಅನುಮೋದನೆ ದೊರೆತ ಕೂಡಲೇ ನೇಮಕಾತಿ ಪ್ರಕ್ರಿಯ ಪ್ರಾರಂಭಗೊಳ್ಳುತ್ತದೆ. ವಿದ್ಯಾರ್ಥಿಗಳ ಬೋಧನಾ ಕಾರ್ಯಕ್ಕೆ ಅರ್ಹತೆ ಹೊಂದಿದ ಅತಿಥಿ ಉಪನ್ಯಾಸಕರನ್ನು ವಿಧಿವಿಧಾನಗಳನ್ನು ಅನುಸರಿಸಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಪೂರ್ವದಲ್ಲಿಯೆ ನೇಮಕಾತಿ ಮಾಡಿ ನಿಯೋಜಿಸಲಾಗಿದೆ. ಕೋವಿಡ್-19 ಮತ್ತು ಲಾಕ್‌ಡೌನ್‌ಗಳ ಹಿನ್ನೆಲೆಯಲ್ಲಿ ಶುಲ್ಕ ಏರಿಕೆ ಮಾಡಿರಲಿಲ್ಲ, ಹಾಗಾಗಿ ಶುಲ್ಕ ಏರಿಕೆ ಮಾಡಲಾಗಿದೆ. ವಿವಿಧ ವಿದ್ಯಾರ್ಥಿ ಕಲ್ಯಾಣದ ವಿವರಗಳನ್ನು ಪುಟ ಸಂ. 25 ರಲ್ಲಿ ನೀಡಲಾಗಿದೆ. ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ, ಸರ್ಕಾರ ನೀಡುವ ಅನುದಾನದ ಹೊರತಾಗಿಯೂ ಅವಕಾಶ ಕಲ್ಪಿಸಲಾಗಿದೆ. ಹಲವಾರು ಸಲ, ಸರ್ಕಾರದಿಂದ ಅನುದಾನ ಬರಲು ವಿಳಂಬವಾದಲ್ಲಿ, ಅಥವಾ ಬರದೇ ಇದ್ದಲ್ಲಿ, ವಿಶ್ವವಿದ್ಯಾಲಯ ತನ್ನ ಸಂಪನ್ಮೂಲದಿಂದ ಭರಿಸುತ್ತದೆ ಎಂದು ಹೇಳಿದರು.

ಸದಸ್ಯರ ಅಭಿಪ್ರಾಯದಂತೆ "ಕುಲಪತಿಗಳ ಅತಿಥಿ ಸತ್ಕಾರ ಭತ್ಯೆ" "Vice-Chancellor's Sumptuary Allowance" ಎಂದು ಲೆಕ್ಕ ಶೀರ್ಷಿಕೆ ಬದಲಾವಣೆ ಮಾಡಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ಕಳೆದ ವರ್ಷ ಮೀಸಲಿಟ್ಟಿದ್ದ ಮೊತ್ತ ರೂ. 20.00 ಲಕ್ಷಗಳನ್ನು ಮುಂದುವರೆಸಲಾಗುವದು ಮತ್ತು ಈ ಶೀರ್ಷಿಕೆಯಡಿಯಲ್ಲಿ ನಿರ್ವಹಿಸುವ ವೆಚ್ಚಗಳನ್ನು ಲೆಕ್ಕಪರಿಶೋಧನೆಯಿಂದ ಹೊರತುಪಡಿಸಿ, ಕುಲಪತಿಗಳ ವಿವೇಚನೆಗೆ ಬಿಡಲಾಗುವದು ಎಂದು ಹೇಳಿದರು. ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು, 'ಕಲಿಕೆಯ ಜೊತೆಗೆ ಗಳಿಕೆ' (Earn While Learn) ಯೋಜನೆಯನ್ನು ಸಹ ಪ್ರಾರಂಭಿಸಿ ಅವಕಾಶ ಕಲ್ಪಿಸಲಾಗಿದೆ ಹಾಗೂ ಭಾರತೀಯ ಜ್ಞಾನ ಯೋಜನೆ, (Indian Knowledge System) ರಾಷ್ಟ್ರೀಯ ಶಿಕ್ಷಣ ನೀತಿಯ ಒಂದು ಭಾಗ ಅದರನ್ವಯ ಕ್ರಮವಹಿಸಲಾಗುವುದು ಎಂದು ಹೇಳಿದರು. ಆಯವ್ಯಯದಲ್ಲಿ ಕಲ್ಪಸಿರುವ ಹಣಕಾಸಿನ ಅವಕಾಶಗಳನ್ನು ಅದಕ್ಕಾಗಿ ನಿಗದಿ ಪಡಿಸಿರುವ ನಿಯಮಗಳನ್ನು ಪಾಲಿಸಿ ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿ 2023-24ನೇ ಸಾಲಿನ ಆಯವ್ಯಯಕ್ಕೆ ಅನುಮೋದನೆ ನೀಡಲು ಸಭೆಗೆ ವಿನಂತಿಸಿದರು.

ಸಿಂಡಿಕೇಟ್ ತೀರ್ಮಾನ:

ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಪ್ರಾಧಿಕಾರಗಳು ಶಿಫಾರಸ್ಸು ಮಾಡಿರುವ 2022–23ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2023–24ನೇ ಸಾಲಿನ ಆಯವ್ಯಯದ ಅಂದಾಜು ಪತ್ರಕ್ಕೆ ಸರ್ವಾನುಮತದ ಅನುಮೋದನೆ ನೀಡಿ ಲೆಕ್ಕ ಶೀರ್ಷಿಕೆ 4–10–26–256 ಯನ್ನು "ಕುಲಪತಿಗಳ ಅತಿಥಿ ಸತ್ಕಾರ ಭತ್ಯೆ" "**Vice-Chancellor's Sumptuary Allowance**" ಎಂದು ಲೆಕ್ಕ ಶೀರ್ಷಿಕೆ ಬದಲಾವಣೆ ಮಾಡಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 20.00 ಲಕ್ಷಗಳ ಮೊತ್ತವನ್ನು ನಿಗದಿಪಡಿಸಲು ಹಾಗೂ ಮಾನ್ಯ ಕುಲಪತಿಗಳು ತಮ್ಮ ವಿವೇಚನೆಯ ಅನುಸಾರ ಈ ಶೀರ್ಷಿಕೆ ಅಡಿಯಲ್ಲಿ ವೆಚ್ಚಗಳನ್ನು ನಿರ್ವಹಿಸಲು ಹಾಗೂ ಸದರಿ ವೆಚ್ಚಗಳನ್ನು ಲೆಕ್ಕ ಪರಿಶೋಧನೆಯ ವ್ಯಾಪ್ತಿಯಿಂದ ಹೊರತುಪಡಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ: 02**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವವನ್ನು ಆಯೋಜಿಸುವ ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸಲು ಮತ್ತು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಕುರಿತಂತೆ ಅಗತ್ಯ ಪ್ರಕ್ರಿಯೆಗಳನ್ನು ಕೈಗೊಳ್ಳುವ ಕುರಿತು.

ಉಲ್ಲೇಖ:
1. ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಇಡಿ/398/ಯುಆರ್‌ಸಿ/2014(3) ದಿನಾಂಕ: 19.02.2015.
2. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ GS/02/GUM/2016 dated: 18.02.2016.
3. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ GS/03/GUM/2020 dated: 11.02.2020.

***

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು 11 ಏಪ್ರಿಲ್, 2022 ರಂದು ಜರುಗಿಸಲಾಗಿದೆ. 2019–20 ನೇ ಸಾಲಿನಲ್ಲಿ ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು 2021–22 ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಮತ್ತು 2021–22 ರಲ್ಲಿ ಸ್ನಾತಕೋತ್ತರ ಉತ್ತೀರ್ಣರಾದ ವಿದ್ಯಾರ್ಥಿಗಳು ಪದವಿ ಪಡೆಯುವ ಅರ್ಹತೆ ಹೊಂದಿರುತ್ತಾರೆ. ಕಾರಣ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವವನ್ನು ಆಯೋಜಿಸಬೇಕಾಗಿದೆ.

ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಮಂತ್ರಿಸುವ ಹಾಗೂ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಕರ್ನಾಟಕ ರಾಜ್ಯಪಾಲರ ಸಚಿವಾಲಯ ಹೊರಡಿಸಿದ ಸುತ್ತೋಲೆ ಸಂಖ್ಯೆ: GS/03/GUM/2020 Date: 11.02.2020 ರಂತೆ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸಲು ಕೆಳಕಂಡ ಸೂಚನೆಗಳನ್ನು ನೀಡಿರುತ್ತಾರೆ.

1. The Universities are to submit complete proposals along with prospective dates convenient to the proposed Chief Guests for the Convocation so as to avoid multiple correspondences with this Secretariat.

2. The University Nomination to the Expert Scrutiny Committee to be submitted along with the Convocation Proposals.
3. The Universities are to refrain from inviting VVIPs like Hon'ble President of India, Hon'ble Prime Minister of India, Hon'ble Vice President of India etc., without prior permission of Hon'ble Governor and Chancellor. The dignitaries may be invited on occasions like Silver / Golden Jubilee Celebrations or any other special occasion of the University depending on significance of the programme.
4. The Universities are advised to invite Scholars like Senior Scientists / Educationists etc., as Chief Guests to the Convocations, who can inspire and guide the University and its students in the field of Education.

ಮೇಲಿನ ಸೂಚನೆಗಳ ಪ್ರಕಾರ ಮೂರು ಜನ ಮುಖ್ಯ ಅತಿಥಿಗಳ ಹೆಸರುಗಳನ್ನು ಸಿಂಡಿಕೇಟ್ ಸಭೆಯ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಬೇಕಾಗುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 69(1) ಪ್ರಕಾರ ಖ್ಯಾತ ವ್ಯಕ್ತಿಗಳಿಗೆ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಪದವಿ ಅಥವಾ ಶೈಕ್ಷಣಿಕ ವಿಶೇಷ ಪುರಸ್ಕಾರಗಳನ್ನು ನೀಡಲು ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡಲು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗೆ ಅವಕಾಶವಿರುತ್ತದೆ. ಈ ಸಂಬಂಧ ಸಾಹಿತ್ಯ, ತತ್ವಶಾಸ್ತ್ರ, ಕಲೆ, ಸಂಗೀತ, ಚಿತ್ರಕಲೆ ಅಥವಾ ಇನ್ನಾವುದಾದರೂ ವಿಷಯಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿ ಖ್ಯಾತರಾದವರುಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 69(2) ರ ಪ್ರಕಾರ ಗೌರವ ಪದವಿಯನ್ನು ಪ್ರಧಾನ ಮಾಡಲು ಅವಕಾಶವಿದೆ. ವಿಜ್ಞಾನ, ತಂತ್ರಜ್ಞಾನ ಯೋಜನೆ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿ ಹೆಸರು ಮಾಡಿರುವ ಮೇಧಾವಿಗಳಿಗೆ ಮತ್ತು ಖ್ಯಾತ ನ್ಯಾಯವಾದಿಗಳು / ಖ್ಯಾತ ನ್ಯಾಯಧೀಶರುಗಳು / ಗಣನೀಯವಾಗಿ ಸಾರ್ವಜನಿಕ ಸೇವೆ ಸಲ್ಲಿಸಿರುವ ಗಣ್ಯರಿಗೆ ಪ್ರಕರಣ 69(3) ಮತ್ತು 69(4) ಪ್ರಕಾರ ಕ್ರಮವಾಗಿ ಡಾಕ್ಟರ್ ಆಫ್ ಸೈನ್ಸ್ ಮತ್ತು ಡಾಕ್ಟರ್ ಆಫ್ ಲಾ ಗೌರವ ಡಾಕ್ಟರೇಟ್ ಪದವಿ ನೀಡಲು ಅವಕಾಶವಿರುತ್ತದೆ. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ: GS/02/GUM/2016 dated:18.02.2016 ರಂತೆ ಗೌರವ ಡಾಕ್ಟರೇಟ್ ಪ್ರದಾನಿಸುವ ಸಲುವಾಗಿ ಪರಿಶೀಲನಾ ಸಮಿತಿಗೆ ಶಿಫಾರಸ್ಸು ಮಾಡಲು ಕೆಳಕಂಡ ಮಾನದಂಡಗಳನ್ನು ನಿಗದಿ ಪಡಿಸಲಾಗಿದೆ.

1. The recommendation for the approval of the Chancellor for the conferment of the Honorary Degree shall be in conformity with Section 69 of the Karnataka State University Act 2000.
2. The names before proposed must be properly considered and deliberated in the Syndicate
3. After deliberation and consideration of such names in the Syndicate, the same shall be forwarded to the Scrutinizing Committee by the University.
4. The Chancellor may constitute Expert Scrutiny Committee consisting of three members one among the members of the Committee is the nominee of the University nominated from amongst the former Vice-Chancellors retired secretaries of Govt. Karnataka or Union of India.

5. The University may nominate its nominee to the scrutinizing Committee well in advance
6. The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation.
7. The number names proposed by the Scrutiny Committee to Confer Honorary Degree should not exceed more than three in a year.

8. The names proposed / recommended by the Syndicate of the University should be kept confidential and under no circumstances be disclosed to the recipient or to the press till the approval of the Chancellor is communicated.

ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಶಿಫಾರಸ್ಸು ಮಾಡುವ ಕುರಿತು ವಿಷಯವನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ.

1. ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ಮೂರು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸ್ಸು ಮಾಡುವುದು.
2. ವಿಶ್ವವಿದ್ಯಾನಿಲಯದ 2ನೇ ಘಟಿಕೋತ್ಸವವನ್ನು 2023 ರ ಮಾರ್ಚ್ ಕೊನೆಯ ವಾರದಲ್ಲಿ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಶಿಫಾರಸ್ಸು ಮಾಡಲಾದ ಮುಖ್ಯ ಅತಿಥಿಗಳಿಗೆ ಸಂಪರ್ಕಿಸಿ, ಅವರಿಗೆ ಅನುಕೂಲಕರವಾದ ದಿನಾಂಕವನ್ನು ಒಳಗೊಂಡ ಪ್ರಸ್ತಾವನೆಯನ್ನು ಮಾನ್ಯ ಕುಲಾಧಿಪತಿಗಳಿಗೆ ಸಲ್ಲಿಸುವುದು.
3. ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಖ್ಯಾತನಾಮರ ಹೆಸರುಗಳನ್ನು ಶಿಫಾರಸ್ಸು ಮಾಡುವುದು ಮತ್ತು ಕುಲಾಧಿಪತಿಗಳು ರಚಿಸುವ ಪರಿಶೀಲನಾ ಸಮಿತಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವುದು.

ಮೇಲಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

ಪ್ರಸಾವನೆಯನ್ನು ಪರಿಗಣಿಸಿ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನಗಳನ್ನು ತೆಗೆದುಕೊಂಡಿತು.

a) ವಿಶ್ವವಿದ್ಯಾನಿಲಯದ 2ನೇ ಘಟಿಕೋತ್ಸವಕ್ಕೆ ಮೂಲತ: ಶಿಕ್ಷಕಿಯಾಗಿ ಗುರುತಿಸಿಕೊಂಡಿರುವ ಭಾರತ ದೇಶದ ಗೌರವಾನ್ವಿತ ರಾಷ್ಟ್ರಪತಿಗಳನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಆಕಾಂಕ್ಷೆಯನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ವ್ಯಕ್ತಪಡಿಸಿದರು. ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿ, ಗೌರವಾನ್ವಿತ ರಾಷ್ಟ್ರಪತಿಗಳನ್ನು ಆಹ್ವಾನಿಸಲು ಮಾನ್ಯ ಕುಲಪತಿಗಳು ಗೌರವಾನ್ವಿತ ರಾಜ್ಯಪಾಲರನ್ನು ಸಂಪರ್ಕಿಸಿ ಕ್ರಮವಹಿಸಬೇಕೆಂದು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

b) ಕಾರಣಾಂತರದಿಂದ ಗೌರವಾನ್ವಿತ ರಾಷ್ಟ್ರಪತಿಗಳು ಆಹ್ವಾನವನ್ನು ಒಪ್ಪಿಕೊಳ್ಳಲು ಸಾಧ್ಯವಾಗದಿದ್ದರೆ, ನಗರದ ಖ್ಯಾತ ಹೃದಯ ವೈದ್ಯರು, ಜಯದೇವ ಹೃದಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾಗಿರುವ ಡಾ: ಸಿ. ಎನ್. ಮಂಜುನಾಥರವರನ್ನು ಅಥವಾ ಇನ್‌ಫೋಸಿಸ್ ಸಂಸ್ಥೆಯ ಸಂಸ್ಥಾಪಕಿಯವರಾದ ಡಾ. ಸುಧಾಮೂರ್ತಿಯವರನ್ನು ಅಥವಾ ಭಾರತದ ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರಾದ

ನ್ಯಾಯಮೂರ್ತಿ ಸಿ. ನಾಗರತ್ನ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಹಾಗೂ ಮಾನ್ಯ ಕುಲಪತಿಗಳು ಆ ಕುರಿತು ಪೂರಕ ಕ್ರಮಗಳನ್ನು ವಹಿಸಲು ಸಭೆ ಅನುಮೋದನೆ ನೀಡಿತು.

c) ಗೌರವ ಡಾಕ್ಟರೇಟ್ ಪದವಿಗಾಗಿ ಖ್ಯಾತನಾಮರ ಹೆಸರುಗಳನ್ನು ಶಿಫಾರಸ್ಸು ಮಾಡಲು ಮಾನ್ಯ ಕುಲಾಧಿಪತಿಗಳು ರಚಿಸುವ ಸಮಿತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ: ಜಯಕರ ಶೆಟ್ಟಿಯವರನ್ನು ನಾಮನಿರ್ದೇಶನ ಮಾಡಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

d) ಗೌಪ್ಯತೆಯ ದೃಷ್ಟಿಯಿಂದ, ಗೌರವ ಡಾಕ್ಟರೇಟ್ ಪದವಿಗಾಗಿ ಮಾನ್ಯ ಸದಸ್ಯರು ಪ್ರಸ್ತಾಪಿಸಲು ಬಯಸುವ ಹೆಸರುಗಳನ್ನು, ನೇರವಾಗಿ ಕುಲಪತಿಗಳಿಗೆ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಸದಸ್ಯರು ಸಲ್ಲಿಸುವ ಮತ್ತು ಕುಲಪತಿಗಳ ಕಛೇರಿಯಲ್ಲಿ ಸ್ವೀಕೃತವಾಗುವ ಹೆಸರುಗಳನ್ನು ಒಳಗೊಂಡ ವಿವರಗಳನ್ನು ಕುಲಾಧಿಪತಿಗಳು ರಚಿಸುವ ಪರಿಶೀಲನಾ ಸಮಿತಿಗೆ ಸಲ್ಲಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.

e) ವಿಶ್ವವಿದ್ಯಾನಿಲಯದ 2ನೇ ಘಟಿಕೋತ್ಸವವನ್ನು ರಾಜ್ಯದ ವಿಧಾನ ಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಜಾರಿಗೊಳಿಸುವ ಚುನಾವಣಾ ನೀತಿ ಸಂಹಿತೆಯನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾದ ದಿನಾಂಕವನ್ನು ನಿರ್ಧರಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ವಿಷಯ ಸಂಖ್ಯೆ– 3

ವಿಷಯ: ವಿಶ್ವವಿದ್ಯಾನಿಲಯದ 2ನೇ ಘಟಿಕೋತ್ಸವ ನಡೆಸಲು ಸಿದ್ಧತೆ ಮಾಡಿಕೊಳ್ಳುವ ಮತ್ತು ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಪರಿನಿಯಮಾವಳಿ 3.1ರ ಪ್ರಕಾರ ಘಟಿಕೋತ್ಸವವನ್ನು ಪ್ರತಿವರ್ಷ ನಡೆಸಬೇಕಾಗಿರುತ್ತದೆ. 2ನೇ ಘಟಿಕೋತ್ಸವವನ್ನು ಮಾರ್ಚ್/ಏಪ್ರಿಲ್–2023ರಲ್ಲಿ ಅಥವಾ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಸೂಚಿಸುವ ತಿಂಗಳಲ್ಲಿ ನಡೆಸಬಹುದಾಗಿದೆ. ಈ ಸಂಬಂಧ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

01. ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸುವುದು. ಈ ಅಧಿಸೂಚನೆಯನ್ನು ನಿಯಮಾವಳಿ ಪ್ರಕಾರ ಘಟಿಕೋತ್ಸವ ನಡೆಯುವ 45 ದಿನಗಳ ಮೊದಲೇ ಹೊರಡಿಸಬೇಕಾಗುತ್ತದೆ.
02. ವಿಶ್ವವಿದ್ಯಾನಿಲಯ ಮತ್ತು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಸ್ಥಾಪಿಸಿರುವ ದತ್ತಿಗಳು ಸೇರಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದವರಿಗೆ ಚಿನ್ನದ ಪದಕ ನೀಡಲು 64 ಪದಕಗಳು ಬೇಕಾಗಿದ್ದು, ಇವುಗಳನ್ನು ಕೊಟೇಷನ್/ಟೆಂಡರ್ ಮೂಲಕ ಖರೀದಿಸಲು ಅನುಮೋದನೆ ಕೋರುವ ಬಗ್ಗೆ.
03. ಹಿಂದಿನ ವರ್ಷದ ಘಟಿಕೋತ್ಸವದಲ್ಲಿ ವಿವಿಧ ಸೇವೆ ಪಡೆಯಲು ಸುಮಾರು 52 ಲಕ್ಷ ವೆಚ್ಚವಾಗಿದ್ದು, ಈ ವರ್ಷ ಸುಮಾರು 55 ರಿಂದ 60 ಲಕ್ಷ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.

ಮೇಲೆ ಹೇಳಿರುವ ವಿಚಾರಗಳಲ್ಲಿ ಕ್ರಮ ತೆಗೆದುಕೊಳ್ಳಲು ಮತ್ತು ಘಟಿಕೋತ್ಸವ ವೆಚ್ಚ ಭರಿಸಲು ಮೊತ್ತವನ್ನು ಮಂಜೂರು ಮಾಡುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದೆ ಒಪ್ಪಿಗೆಗಾಗಿ ಮಂಡಿಸಲಾಗಿದೆ.

**ಸಿಂಡಿಕೇಟ್ ತೀರ್ಮಾನ:**

**a) ಪ್ರಸ್ತಾವನೆಯನ್ನು ಪರಿಗಣಿಸಿ ವಿಶ್ವವಿದ್ಯಾನಿಲಯದ ಎರಡನೇ ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲು ಅನುಮೋದನೆ ನೀಡಲಾಯಿತು.**

**b) ಕಳೆದ ವರ್ಷದಂತೆ ವಿಶ್ವವಿದ್ಯಾನಿಲಯ ಮತ್ತು ವಿವಿಧ ಸಂಘ ಸಂಸ್ಥೆಗಳು ಮತ್ತು ದಾನಿಗಳು ಸ್ಥಾಪಿಸಿರುವ ಚಿನ್ನದ ಪದಕಗಳನ್ನು ಸಿದ್ಧಪಡಿಸಲು ಅಗತ್ಯ ಕ್ರಮವಹಿಸಲು ಅನುಮೋದನೆ ನೀಡಲಾಯಿತು.**

**c) ಘಟಿಕೋತ್ಸವದ ಸಿದ್ಧತೆ ಹಾಗೂ ವಿವಿಧ ಸೇವೆಗಳನ್ನು ಪಡೆಯಲು ಅಂದಾಜಿಸಿದ ರೂಪಾಯಿ 60.00 ಲಕ್ಷ ಮೊತ್ತಕ್ಕೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ–** 4

**ವಿಷಯ:** ಸೆಪ್ಟಂಬರ್/ಅಕ್ಟೋಬರ್ 2022 ರಲ್ಲಿ ನಡೆದ ಸ್ನಾತಕ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಅನುಮೋದನೆ ಪಡೆಯುವ ಕುರಿತು.

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ 2 ಕಾಲೇಜುಗಳ ವಿದ್ಯಾರ್ಥಿಗಳು ಸೆಪ್ಟಂಬರ್/ಅಕ್ಟೋಬರ್ 2023 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿರುವುದು ವಿಚಕ್ಷಣದಳ ಪತ್ತೆ ಮಾಡಿ ವರದಿ ಮಾಡಿರುತ್ತಾರೆ. ವಿಚಕ್ಷಣದಳ ಮಾಡಿರುವ ವರದಿಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ–2018ರಲ್ಲಿ ಅಧ್ಯಾಯ 16ರಲ್ಲಿನ Schedule of Penalties ಕ್ರಮ ಸಂಖ್ಯೆ 01 ಮತ್ತು 02 ರಲ್ಲಿ ವಿವರಿಸಿರುವಂತೆ ದಂಡ ವಿಧಿಸಲಾಗಿದೆ. Malpractice Enquiry Committee ಮುಂದೆ ಮಂಡಿಸಲಾಗಿತ್ತು. ಸಮಿತಿಯು ಕುಲಂಕುಶವಾಗಿ ದೂರುಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಲಿಖಿತವಾಗಿ ಇ–ಮೇಲ್ ಮೂಲಕ ದೂರುಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ/ಒಪ್ಪಿಗೆ ಕೋರಿ ಪತ್ರ ಕಳುಹಿಸಲಾಗಿತ್ತು. ಇದಕ್ಕೆ ಉತ್ತರವಾಗಿ 3 ವಿದ್ಯಾರ್ಥಿಗಳು, ಅವರು ಮಾಡಿದ ತಪ್ಪನ್ನು ಒಪ್ಪಿಕೊಂಡು ಲಿಖಿತವಾಗಿ ಪತ್ರಗಳನ್ನು ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 02.02.2023 ರಂದು ನಡೆದ Malpractice Enquiry Committee ಸಭೆಯ ಮುಂದೆ ಹಾಜರಾಗಿರುತ್ತಾರೆ. ಈ ಎಲ್ಲಾ ವಿವರಗಳನ್ನು ದಿನಾಂಕ 02.02.2023 ರಂದು ನಡೆದ Malpractice Enquiry Committee ಸಭೆಯ ಮುಂದೆ ಮಂಡಿಸಲಾಗಿತ್ತು.

ವಿಷಯ: ಕಲಾ ವಿಭಾಗ

| Sl No | Course and Subject Details | Student Details | Nature of Malpractice committed by students | Students Replay for the Charges Framed | Penalty imposed |
|---|---|---|---|---|---|
| 01 | BA<br>2nd Semester<br>*Subject Name:*<br>Economics – Karnataka Economy | VIJAYENDRA.P<br>Reg.No:U18IC21A0 015<br>V.V.Puram Science College, Bangalore. | Caught by Squad For having Chits and Xerox copies (3 sheets of A4 Sheets) | He was appeared before the Malpractice Enquiry Committee. | To deny the benefit of performance of the examination for which the candidate has appeared and debar him for a further One more examination and penalty of Rs.5000/- |
| 02 | BA<br>2nd Semester<br>*Subject Name:*<br>Economics – Karnataka Economy | NAGAPPA.B<br>Reg.No:U18IC21A0 084<br>V.V.Puram Science College, Bangalore. | Caught by Squad For having Chits and Xerox copies (9 Pages of A4 Sheets) | He was appeared before the Malpractice Enquiry Committee. | To deny the benefit of performance of the examination for which the candidate has appeared and debar him for a further One more examination and penalty of Rs.5000/- |
| 03 | BA<br>2nd Semester<br>*Subject Name:*<br>Political Science-Western Political Thought | PRABHAKARAN<br>Reg.No:U18IB21A0 036<br>V.V.Puram College of Arts & Commerce College, Bangalore. | Caught by Squad For having Writing Chit . | He was appeared before the Malpractice Enquiry Committee. | Denial of the benefit of performance of the examination appeared and penalty of Rs.5,000/ |

Malpractice ಶಿಫಾರಸ್ಸಿನ ಪ್ರಕಾರ ತೆಗೆದುಕೊಳ್ಳಲಾಗಿರುವ ಕ್ರಮದ ಅನುಮೋದನೆಗಾಗಿ ಸಿಂಡಿಕೇಟ್‌ನ ಮುಂದೆ ಮಂಡಿಸಲಾಗಿದೆ. Malpractice Enquiry Committee ಸಭೆಯ ನಡಾವಳಿಯ ಪ್ರತಿಯನ್ನು ಲಗತ್ತಿಸಲಾಗಿದೆ.

<u>ಸಿಂಡಿಕೇಟ್ ತೀರ್ಮಾನ:</u>

ಕೈಗೊಂಡ ಕ್ರಮವನ್ನು ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ– 5

Sub: Procurement of Equipments to BCU, Dept of Chemistry under VGST Research Project

***<u>Reference Note:</u>***

With reference to the above, the Dept. of Chemistry, BCU has been sanctioned a research project by VGST, Government of Karnataka. Under this the following equipments to be procured to excecute the project.

1. Muffle furnace -1.50 lakhs
2. Microwave Synthesizer – 13,15,678.00

Permission is sought for procuring the above equipments (1) by quotation (2) through tenders.

<u>ಸಿಂಡಿಕೇಟ್ ತೀರ್ಮಾನ:</u>

ಪ್ರಸ್ತಾವನೆಗೆ ಒಪ್ಪಿಗೆ ನೀಡಿ ನಿಯಮಾವಳಿಗಳಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ– 6

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022–23 ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿಷಯಗಳ ಪರೀಕ್ಷಾ ಮಂಡಳಿಗಳನ್ನು ಅನುಮೋದಿಸುವ ಕುರಿತು.

******

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಸೆಕ್ಷನ್ 36(1)(2)(3) ರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2022–23 ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ವಿಷಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿಗಳನ್ನು ದಿನಾಂಕ 08.12.2022 ಮತ್ತು 09.12.2022 ರಂದು ನಡೆದ BoAE ಸಭೆಗಳಲ್ಲಿ ರಚಿಸಲಾಗಿದ್ದು, ಸದರಿ ಪರೀಕ್ಷಾ ಮಂಡಳಿಗಳನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಬೇಕಾಗಿತ್ತು. ಪರೀಕ್ಷೆಗಳು ನಡೆಯುವ ದಿನಾಂಕ ಸಮೀಪಿಸಿದ ಹಿನ್ನೆಲೆಯಲ್ಲಿ ಪರೀಕ್ಷಾ ಮಂಡಳಿ ರಚಿಸಿ, ಸಂಭಂದಪಟ್ಟ ಅಧ್ಯಕ್ಷರು ಮತ್ತು ಸದಸ್ಯರಿಗೆ ಆದೇಶ ಹೊರಡಿಸಲಾಗಿದೆ. ಆದುದರಿಂದ, ಈಗ ತೆಗೆದುಕೊಂಡಿರುವ ಕ್ರಮದ ಸ್ಥಿರೀಕರಣಕ್ಕಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿವಿಧ ವಿಷಯಗಳ ಪರೀಕ್ಷಾ ಮಂಡಳಿಗಳನ್ನು ರಚಿಸಿ ತತ್ಸಂಬಂಧ ಕೈಗೊಂಡ ಕ್ರಮಗಳನ್ನು ಸ್ಥಿರೀಕರಿಸಲು ಸಭೆ ತೀರ್ಮಾನಿಸಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ